ಅಂಥ ಅಪರಾಧ ಮಾಡಿದ್ದೀನಿ? ಗೆಳತಿ ಮನೇಗ್ ಹೋಗಿದ್ ತಪ್ಪಾ?' ಎಂದು ಸ್ವಲ್ಪ ಜೋರಾಗಿಯೇ ಕೇಳಿದರು; ಆಗ ಗಾಂಧಿ, 'ಗೆಳತಿ ಮನೇಗೇ ಹೋಗಿದ್ದೆ ತಾನೆ?' ಎಂದು ಪ್ರಶ್ನಿಸಿದರು. ಕಸ್ತೂರ್ ಹೇಳಿದರು: 'ಏನ್ ಪ್ರಶ್ನೆ ಇದು. ನಿಮ್‌ಹೆಂಡ್ತಿ ಬಗ್ಗೆ ನಿಮಗೇ ನಂಬಿಕೆ ಇಲ್ವ? ಹೀಗೆಲ್ಲ ಅನುಮಾನ ಪಟ್ರೆ ನಾನು ಬಾಳ್ವೆ ಮಾಡೋದ್ ಹೇಗೆ?' ಎಂದು ಕೇಳುತ್ತ ಕಣ್ಣೀರಾದರು. ಆಗ ಗಾಂಧಿ ಸಮಾಧಾನ ಸ್ಥಿತಿಗೆ ಬರುತ್ತಾ, 'ಹಾಗಲ್ಲ ಕಸ್ತೂರ್, ನೀನು ಎಂಥ ಹೆಂಗಸು ಅಂತ ನಂಗೊತ್ತು. ಆದ್ರೆ ನೀನು ಬೇರೆಯವರ ಬಾಯಿಗೆ ಬಿದ್ದಾಗ ಬೇಜಾರಾಗುತ್ತೆ' ಎಂದರು.

'ಈಗ ಯಾರ್ ಬಾಯಿಗ್ ಬಿದ್ದಿದ್ದೀನಿ? ಹೇಳಿ.'

'ನೀನ್ ಎಲ್ಲೆಲ್ಲೊ ಓಡಾಡ್ತೀಯ ಅಂತ ಶೇಖ್ ಮೆಹ್ತಾಬ್ ಹೇಳ್ದ.'

'ಮೊದ್ಲು ಅಂತೋರ್ ಸಹವಾಸ ಬಿಡಿ; ಸಂಸಾರದಲ್ಲಿ ಹುಳಿ ಹಿಂಡೋರ್ ಯಾವತ್ತೂ ಸ್ನೇಹಿತ್ರಲ್ಲ.'

'ಆದ್ರೆ ಬೇರೆಯವರು ಹಾಗ್ ಮಾತಾಡ್ದಾಗ ಅನುಮಾನ ಹುಟ್ಟುತ್ತೆ.'

'ಅನುಮಾನ ಅನ್ನೋದು ದೊಡ್ಡರೋಗ. ನಿಮ್ ಹೆಂಡ್ತೀನ್ ನಂಬ್ತೀರೊ, ಚಾಡಿಕೋರನ್ ನಂಬ್ತೀರೊ, ತೀರ್ಮಾನಿಸಿ' ಎಂದು ರಪ್ಪನೆ ಹೇಳಿದ ಕಸ್ತೂರ್ ಸೀದಾ ಅತ್ತೆಯ ಬಳಿಗೆ ಹೋದರು. ಅತ್ತೆಯಲ್ಲಿ ಏನೂ ಹೇಳಿಕೊಳ್ಳಲಿಲ್ಲ. ಏನೂ ಆಗಿಲ್ಲವೆಂಬಂತೆ ಮನೆಕೆಲಸದಲ್ಲಿ ತೊಡಗಿದರು. ಪುತಳಿಬಾಯಿಯೂ ತನ್ನ ಮಗನ ಆಕ್ಷೇಪವನ್ನು ಹಂಚಿಕೊಳ್ಳಲಿಲ್ಲ. ಎಂದಿನಂತೆ ಸಹಜವಾಗಿ ಇದ್ದರು. ಒಟ್ಟಿಗೇ ಕೆಲಸ ಮಾಡುತ್ತ ಪುತಳಿಬಾಯಿ 'ಕಸ್ತೂರ, ನಾಡಿದ್ದು ದೇವಸ್ಥಾನಕ್ಕೆ ಹೋಗಿ ಬರೋಣ' ಎಂದರು. ಕಸ್ತೂರ್ 'ಆಯ್ತು ಅತ್ತೆ' ಎಂದರು ತಣ್ಣಗೆ.

ಎರಡು ದಿನಗಳ ನಂತರ ಪುತಳಿಬಾಯಿ ಮತ್ತು ಕಸ್ತೂರ್ ಇಬ್ಬರೂ ದೇವಸ್ಥಾನಕ್ಕೆ ಹೋದರು. ಕಾಲೇಜಿನಿಂದ ಬಂದ ಗಾಂಧಿ, ಮನೆಯಲ್ಲಿ ಕಸ್ತೂರ್ ಇಲ್ಲದ್ದನ್ನು ಗಮನಿಸಿದರು. ಕೆಲಸದವರನ್ನು ಕೇಳಿದರು: ತಾಯಿಯ ಜೊತೆ ದೇವಸ್ಥಾನಕ್ಕೆ ಹೋಗಿರುವ ವಿಷಯ ತಿಳಿಯಿತು; ಕೋಣೆಯಲ್ಲಿ ಕೂತು ಕನಲಿದರು. ಅವರು ಬರುವುದನ್ನೇ ಕಾದರು. ಅವರು ಹಿಂತಿರುಗಿದ ಮೇಲೆ ಕಸ್ತೂರ್ ಸಹಜವಾಗಿ ಕೋಣೆಗೆ ಬಂದರು.

ಎದುರಿಗೊಂದು ಕೆಂಡದ ಬಂಡೆ!  
ಬಂಡೆಯ ಒಳಗೆ ಗಂಡಿನ ಚಂಡೆ!  
ಸಿಟ್ಟಿನ ಕೈಯಲ್ಲಿ ಸಟ್ಟುಗ!  
ಹೆಡೆಯಿಲ್ಲದ ನಾಗ!

ಕಸ್ತೂರ್‌ಗೆ ಅರ್ಥವಾಯಿತು. ಬುಸುಗುಡುವ ಗಾಂಧಿ ಕಚ್ಚಿ ವಿಷವುಣಿಸುವ ನಾಗನಲ್ಲ ಎಂದೂ ಗೊತ್ತಿತ್ತು. ಏನೊ ಅವಮಾನವಾದಂತೆ ಅನುಮಾನಿಸುವುದು, ರೇಗುವುದು, ಆನಂತರ ಬಾಗುವುದು – ಇದು ಆಗಾಗ್ಗೆ ಕಾಣುವ, ಕಾಣೆಯಾಗುವ ರೂಢಿಮುಂಗೋಪ!

ಕೋಪದೊಳಗಿನ ತಾಪ! 'ಗಾಂಧಿ ಉಳಿದು, ಬೆಳೆದು, ಬದುಕಿ ಬೆಳಕಾಗಲಿ; ಆದರೆ ಕೋಪತಾಪಗಳಿಗೆ ಸಂತಾಪ ಸೂಚಿಸುವ ಕ್ಷಣಬರಲಿ' ಎಂಬಂತೆ ಕಸ್ತೂರ್ ಮಾತು ಮತ್ತು ಮೌನದ ನಡುವೆ ನೊಂದು ನಿಂತರು.

ಗಾಂಧಿಯೂ ಮೌನ; ಕಸ್ತೂರ್ ಮೌನ;  
ಖಾಲಿ ಹುತ್ತದ ಒಳಗೆ ಗಾಳಿ ಸದ್ದು  
ಮಾತಿಗಿಂತ ಯಾತನೆ ಈ ಮೌನ;  
ಮಾತ ಹವಣಿಸಿದೆ ಬರಲು ಕದ್ದು!

ಕಡೆಗೆ ಕಸ್ತೂರ್ ಮಾತಾಡಿದರು: 'ಯಾಕೆ ಮಾತು ಹುತ್ತ ಸೇರ್ಕೊಂಡ್ ತರಾ ಕುಂತಿದ್ದೀರ?'

ಗಾಂಧಿ ಮಾತಾಡಲಿಲ್ಲ.

'ಯಾಕ್ ಸುಮ್ನೆ ಬುಸ್‌ಗುಡ್ತೀರಿ ಒಳಗೇನೇ? ಸದ್ದು ಮಾಡಿ ಹೊರ್ಗಡೆ.' ಗಾಂಧಿ ದಿಟ್ಟಿಸಿದರು.

'ಎಷ್ಟು ಸಾರಿ ಹೇಳ್ಬೇಕು ನಿನಗೆ?'

'ಯಾವ ವಿಷಯ?'

'ನನ್ನನ್ನ ಕೇಳ್ದೆ ಮನೆ ಬಿಟ್ ಹೋಗ್‌ಬಾರದು ಅಂತ.'

'ಅತ್ತೆ ದೇವಸ್ಥಾನಕ್ ಹೋಗೋಣ ಅಂದ್ರು, ಹೋದೆ.'

'ಹೋಗೋಣ ಅಂತ ಇವತ್ತೇ ಹೇಳಿದ್ರ?'

'ಇಲ್ಲ, ಮೊನ್ನೆ ಹೇಳಿದ್ರು, ಆದ್ರೆ ಇವತ್ತೇ ಹೋಗ್ ಬೇಕಾಗುತ್ತೆ ಅಂತ ಗ್ಯಾರಂಟಿ ಇರ್ಲಿಲ್ಲ.'

'ವಿಷಯ ಗೊತ್ತಾದ್ ಕೂಡ್ಲೆ ನನ್ನ ಒಪ್ಪಿಗೆ ತಗೋಬೇಕಿತ್ತು.'

'ಅತ್ತೆಯವರೇ ಕರೆದಾಗ ನಿಮ್ ಒಪ್ಪಿಗೆ ತಗೋಬೇಕಾ?'

'ಹೌದು, ಯಾರ್ ಕರುದ್ರೂ ತಗೋಬೇಕು. ದೇವರು ಕರುದ್ರೂ ತಗೋಬೇಕು.'

'ದೇವರು ಕರೆದಾಗ ಒಪ್ಪಿಗೆ ಪ್ರಶ್ನೆನೇ ಇರೊಲ್ಲ. ಯಾರ್ ಒಪ್ಪಿಗೇಗೂ ಅವಕಾಶ ಕೊಡ್ದೆ ಕರಿಸ್ಕೊಳ್ಳೊ ಅಧಿಕಾರ ದೇವರದು! ಆಗ ನೀವ್ ಗಂಡಂದಿರು ಏನ್ ಮಾಡ್ತೀರಿ?'

ಗಾಂಧಿಗೆ ಪೇಚಾಟಕ್ಕಿಟ್ಟುಕೊಂಡಿತು. ಗಾಂಧಿಯೂ ದೇವರ ಭಕ್ತರೇ. ದೇವರ ಅಧಿಕಾರಕ್ಕೆ ಎದುರಾಡೋದುಂಟೆ? ಆದರೂ ಒಂದು ಉತ್ತರ ಕೊಟ್ಟರು:

'ದೇವರು ಕರಿಸ್ಕೊಂಡಾಗ ನಾವಿಲ್ಲಿರೊಲ್ಲ. ಇಲ್ಲಿರುವಾಗ ಹೇಗಿರ್ಬೇಕು ಅಂತ ಕಲ್ತ್‌ಕೊ, ಇಲ್ದಿದ್ರೆ ತವರು ಮನೇಗ್ ಕಳಿಸ್ಬಿಡ್ತೀನಿ. ಅಷ್ಟೆ.'

'ತವರುಮನೆ ಹೆಣ್ಮಕ್ಕಳಿಗೆ ಇಷ್ಟದ್ ಮನೆ. ಆದ್ರೆ ಗಂಡನಿಂದ ದಬ್ಬಿಸ್ಕೊಂಡು ತವರುಮನೆ ಸೇರೋಕೆ ಯಾವ್ ಹೆಂಡ್ತೀಗೂ ಇಷ್ಟ ಇರೊಲ್ಲ.'

'ಹಾಗಿದ್ರೆ ನಾನ್ ಹೇಳಿದಂತೆ ಕೇಳ್‌ಬೇಕು, ಅಷ್ಟೆ.'

'ಚಾಡಿಕೋರರು ಕೊಟ್ಟ ಚಾಟಿ ಹಿಡ್ಕೊಂಡ್ ಮನೇಗ್ ಬರ್‌ಬೇಡಿ; ಅಷ್ಟೆ' ಎಂದು ಕಸ್ತೂರ್ ಅಲ್ಲಿಂದ ಹೊರಟರು.

ಗಾಂಧಿ ಮತ್ತು ಕಸ್ತೂರ್ ನಡುವೆ ಆಗಾಗ್ಗೆ ಇಂಥ ಮುಖಾಮುಖಿ ನಡೆಯುತ್ತಲೇ ಇತ್ತು. ಒಮ್ಮೆಯಂತೂ ಗಾಂಧಿ, ತನ್ನ ಪತ್ನಿ ಕಸ್ತೂರರನ್ನು ತವರುಮನೆಗೆ ಅಟ್ಟಿಯೇ ಬಿಟ್ಟರು. ಅಪ್ಪ–ಅಮ್ಮನ ಮಾತಿಗೂ ಕಿವಿಗೊಡಲಿಲ್ಲ. ಮನೆಯಲ್ಲಿ ಎಲ್ಲರಿಗೂ ಬೇಸರ. ಯಾರೂ ಮನಸಾರೆ ಮಾತಾಡದ ಪರಿಸರ. ಎಲ್ಲವೂ ಔಪಚಾರಿಕೆ. 'ತಿಂಡಿಗೆ ಬಾ', 'ಊಟಕ್ಕೆ ಬಾ' – ಇಷ್ಟೇ, ಪ್ರೀತಿಯ ಮಾತಿರಲಿ, ಜಗಳವಾಡಲೂ ಸಾಧ್ಯವಾಗುತ್ತಿಲ್ಲ. ಗಾಂಧಿಗೆ ತನ್ನ ತಪ್ಪು ಅರಿವಾಗತೊಡಗಿತು. ಆಗ ತಾವೇ ಕಸ್ತೂರ್ ಮನೆಗೆ ಹೋದರು. ಕ್ಷಮೆ ಕೋರಿದರು. ವಾಪಸ್ ಕರೆದುಕೊಂಡು ಬಂದರು.

* * *

'ನೀವು ಅಂದ್ರೆ ಹೀಗೇನೇ ರೇಗೋದು–ಮಾಗೋದು, ಮಾತಾಡೋದು–ಮೌನವಾಗೋದು, ನಿಮ್ ಸ್ವಭಾವ. ಕೆರಳೋದು–ಕ್ಷಮೆಕೇಳೋದು ಕೂಡ ಇದ್ದೇ ಇರುತ್ತೆ.'

–ಸಬರಮತಿ ಆಶ್ರಮದಲ್ಲಿ ಕಸ್ತೂರ್‌ಬಾ ಹೇಳಿದಂತಾಯಿತು.

ಕಸ್ತೂರ್‌ಬಾ ಮುಖದಲ್ಲಿ ನಿರ್ಲಿಪ್ತತೆ ಇತ್ತು. ನಿರ್ಲಿಪ್ತತೆ ನಿರ್ಭಾವ ಸ್ಥಿತಿ ಅಲ್ಲ. ಕೆಲವೊಮ್ಮೆ ಯಾವ ತಂಟೆ ತಕರಾರೂ ಬೇಡ ಎಂಬ ಭಯ. ಇನ್ನು ಕೆಲವೊಮ್ಮೆ ಅಂಟಿಯೂ ಅಂಟದಂತಿರುವ ಸ್ಥಗಿತ ಸ್ಥಿತಿ. ಮಗದೊಮ್ಮೆ ಆಗಿದ್ದನ್ನು, ಆಗುತ್ತಿರುವುದನ್ನು ಮಾನಸಿಕ ದೂರದಿಂದ ನೋಡುವ ನಿಜಸ್ಥಿತಿ. ಇದರಲ್ಲಿ ಕೊನೆಯದಾದರೆ ಸರಿ. ಉಪಾಯವೋ ಸ್ಥಗಿತ ಸ್ಥಿತಿಯೋ ಆಗಿದ್ದರೆ ಅದು ನಿಜ ನಿರ್ಲಿಪ್ತತೆಯಾಗುವುದಿಲ್ಲ. ಯಥಾಸ್ಥಿತಿ ಸಮರ್ಥನೆಯೂ ಆಗುತ್ತದೆ. ಚಲನಶೀಲತೆಯ ವಿರೋಧಿಯಾದ ಸ್ಥಗಿತತೆಯೇ ನಿರ್ಲಿಪ್ತತೆಯಾದರೆ ಅದು ಅವಕಾಶವಾದಿಯಾಗುವ ಅಪಾಯವೂ ಇರುತ್ತದೆ. ನಿರ್ಲಿಪ್ತತೆಯು ಸಮಚಿತ್ತತೆಯಾಗಬೇಕು. ಆದರೆ ಕಸ್ತೂರ್‌ಬಾ ಅವರಲ್ಲಿ ಇದ್ದ ನಿರ್ಲಿಪ್ತತೆಯಲ್ಲೊಂದು ನಿರ್ಮಲತೆಯಿತ್ತು. ಆಗಿದ್ದ ಅವಘಡಗಳನ್ನು ಸ್ವಚ್ಛ ಮಾಡಿಕೊಂಡ ಮುನ್ನೋಟದ ಮುಖವನ್ನು ಹೊಂದಿತ್ತು. ಹಾಗಾಗಿ ಅವರು ನಿರ್ಲಿಪ್ತತೆಯನ್ನು ಸಮಚಿತ್ತತೆಯಲ್ಲಿ ಪರಿಭಾವಿಸುತ್ತ ಮಾತು ಮುಂದುವರಿಸಿದರು:

'ನೀವು ಬ್ಯಾರಿಸ್ಟರ್ ಪರೀಕ್ಷೆ ಕಟ್ತೀನಿ ಅಂತ ಲಂಡನ್‌ಗೆ ಹೊರಟು ನಿಂತ್ರಿ. ನಾನು ಬೇಡ ಅಂದೆ. ನಾನು ತುಂಬು ಗರ್ಭಿಣಿ. 1885ರಲ್ಲಿ ಹುಟ್ಟಿದ ಮಗು ನಾಲ್ಕೇ ದಿನಕ್ಕೆ ಸತ್ತು ಹೋಗಿತ್ತು. ನೀವು ದೂರ ಹೋಗೋದು ನನಗೆ ಸುತಾರಾಂ ಇಷ್ಟ ಇರ್ಲಿಲ್ಲ. 1888ರಲ್ಲಿ ಅಂತ ಕಾಣುತ್ತೆ. ನನಗೆ ಎರಡನೇ ಹೆರಿಗೆ ಆಯ್ತು. ಗಂಡು ಮಗು. ಒಂದಷ್ಟು ದಿನ ಮಗೂದೇ ಚಿಂತೆ. ಮೊದಲ್ನೇ ಮಗು ತರಾ ಆಗದೇ ಇರ್ಲಪ್ಪ ದೇವ್ರೆ ಅಂತ ಬೇಡ್ಕೊಂಡೆ. ಜೊತೆಗೆ ನೀವ್ ಲಂಡನ್‌ಗೆ ಹೋಗೋದ್ ಬೇಡ ಅಂತ ಕೇಳ್ಕೊಂಡೆ. ನೀವೆಲ್ ನನ್ ಮಾತ್ ಕೇಳ್ತೀರಿ. ಹೊರಟು ನಿಂತ್ರಿ. ಆಗ ಏನೆಲ್ಲ. ಆಯ್ತು!'

ಕಸ್ತೂರ್ ಬಾ ನೆನಪಿನತ್ತ ಸಾಗಿದಂತೆ ಕಂಡರು.

ಗಾಂಧಿ, ಅವರನ್ನು ನೋಡುತ್ತ ಜೊತೆಗೂಡಿದರು.

* * *

ಕಸ್ತೂರ್ ತೊಟ್ಟಿಲು ತೂಗುತ್ತಿದ್ದರು  
ಪಿಳಿ ಪಿಳಿ ಕಣ್ಣುಗಳ ಗಿಳಿಮನ.  
ಚಂದ ತುಂಬಿದ ಮೌನವನ.  
ಮಾತಾಡದೆಯೂ ಅದೆಷ್ಟು ಮಾತು!  
ಮಾತೆಗೆ ಮಾತ್ರ ತಿಳಿಯುವ ಮಾತು.